ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ಬಿ. ಬಿ. ಎಂ. ಪಿ ನೌಕರರ ಭವಿಷ್ಯನಿಧಿ ಪಾವತಿ ಬಗ್ಗೆ

ಶ್ರೀ ಎನ್. ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) -

429 (503) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 2010ರಿಂದ 2018ರ ಅವಧಿಯಲ್ಲಿ ನಿಯೋಜನೆಯ ಮೇರೆಗೆ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸಿದ ಅಭಿಯಂತರುಗಳು, ನೌಕರರುಗಳು ಹಾಗೂ ಅಧಿಕಾರಿಗಳ ವೇತನದಲ್ಲಿ ಸಾಮಾನ್ಯ ಭವಿಷ್ಯನಿಧಿ ಬಾಬ್ತು ಕಠಾವು ಮಾಡಿದ ಮೊತ್ತವನ್ನು ಮಹಾ ಲೆಕ್ಕಪಾಲರ ಮುಖೇನ ಸಂಬಂಧಪಟ್ಟವರ ಖಾತೆಗೆ ಜಮಾ ಮಾಡಿರುವ ಹಾಗೂ ಮಾಡದೇ ಇರುವ ಪ್ರತೀ ಅಧಿಕಾರಿಯ ಹೆಸರು, ಪದನಾಮ ಹಾಗೂ ಖಾತೆಗೆ ಜಮಾ ಮಾಡಿರುವ ಮತ್ತು ಜಮಾ ಮಾಡದಿರುವ ವಿವರ ದಿನಾಂಕದೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು;

(ಆ) ಈ ಕಾರ್ಯ ನಿರ್ವಹಿಸುತ್ತಿದ್ದ ವಿಷಯ ನಿರ್ವಾಹಕರು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ವಿವರ ಮತ್ತು ಕರ್ತವ್ಯ ನಿರ್ಲಕ್ಷ ಮಾಡಿದ್ದಲ್ಲಿ, ಅಂತವರ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿವರ ನೀಡುವುದು;

(ಇ) ಈ ಬಗ್ಗೆ ಬಾಧಿತ ಅಭಿಯಂತರುಗಳ, ನೌಕರರುಗಳು ಹಾಗೂ ಅಧಿಕಾರಿಗಳು ಈವರೆಗೆ ಸಲ್ಲಿಸಿರುವ ಮನವಿಗಳೆಷ್ಟು? (ವಿವರ ಮತ್ತು ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿವರ ನೀಡುವುದು)